**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) ಇವರು ನಿಯಮ 330 ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಯ ಈ ಕೆಳಕಂಡ ಪ್ರಶ್ನೆಗೆ ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರ ಉತ್ತರ.**

**ವಿಷಯ:- ಕಬ್ಬನ್ ಪಾರ್ಕ ಉದ್ಯಾನವನದಲ್ಲಿ ರಜಾ ದಿನಗಳಲ್ಲಿ ವಾಹನಗಳ ಸಂಚಾರಕ್ಕೆ ಸಂಬಂಧಿಸಿದಂತೆ ವಿಧಿಸಲಾಗುತ್ತಿರುವ ನಿಯಮಗಳು ಹಾಗೂ ನಿರ್ಬಂಧಗಳಿಂದ ಕಬ್ಬನ್ ಪಾರ್ಕ್ ಸುತ್ತಮುತ್ತ ರಜಾ ದಿನಗಳಲ್ಲಿ ಉಂಟಾಗುವ ವಾಹನ ದಟ್ಟಣೆಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಮಾನ್ಯ ಸಚಿವರಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.**

****

**ಉತ್ತರ:** ಕಬ್ಬನ್ ಉದ್ಯಾನವನವು ಬೆಂಗಳೂರು ನಗರದ ಹೃದಯ ಭಾಗದಲ್ಲಿದ್ದು ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ಸಾರ್ವಜನಿಕರು, ನಡಿಗೆದಾರರು, ಮಕ್ಕಳು, ವಯೋವೃದ್ಧರು ಮತ್ತು ಪ್ರವಾಸಿಗರು ಅಧಿಕ ಸಂಖ್ಯೆಯಲ್ಲಿ ಉದ್ಯಾನವನದ ಸೊಬಗನ್ನು ಆಹ್ಲಾದಿಸುತ್ತಾರೆ. ಅದರಲ್ಲಿಯೂ ವಿಶೇಷವಾಗಿ ರಜಾ ದಿವಸಗಳಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯಾನವನದಲ್ಲಿ ವಿಹಾರಿಸಲು ಮಕ್ಕಳು ಮತ್ತು ಸಾರ್ವಜನಿಕರು ಆಗಮಿಸುತ್ತಾರೆ. ಕಬ್ಬನ್ ಉದ್ಯಾನವನದಲ್ಲಿ ವಾಹನ ಸಂಚಾರದಿಂದ ವಾಯು ಮಾಲಿನ್ಯ ಮತ್ತು ಶಬ್ದ ಮಾಲಿನ್ಯವು ಅಧಿಕವಾಗಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಇದನ್ನು ನಿಯಂತ್ರಿಸುವ ಉದ್ದೇಶದಿಂದ ಕಬ್ಬನ್ ಉದ್ಯಾನವನದ ಒಳಭಾಗದ ರಸ್ತೆಗಳಲ್ಲಿ ಪೊಲೀಸ್ ಅಧಿಸೂಚನೆ ಸಂಖ್ಯೆ: ಅಸೂ/01/Jtಸಿಪಿ(ಸಂ)/2020 ದಿನಾಂಕ: 10-01-2020 ರಂತೆ ಕಬ್ಬನ್ ಉದ್ಯಾನವನದ ಒಳ ರಸ್ತೆಗಳಲ್ಲಿ ಪ್ರತಿ ಮಾಹೆಯ ಭಾನುವಾರ, 2 ನೇ ಮತ್ತು 4 ನೇ ಶನಿವಾರಗಳಂದು ಹಾಗೂ ರಾಷ್ಟ್ರೀಯ ದಿನಾಚರಣೆಗಳಾದ ಗಣರಾಜ್ಯೋತ್ಸವ ಜನವರಿ – 26, ಸ್ವಾತಂತ್ರ್ಯ ದಿನಾಚರಣೆ ಆಗಸ್ಟ- 15, ಗಾಂಧಿಜಯಂತಿ ಅಕ್ಟೋಬರ್ - 2 ರಂದು ಮತ್ತು ಸಾರ್ವಜನಿಕರ ರಜಾ ದಿನಗಳಂದು ವಾಹನಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

ಕಬ್ಬನ್ ಉದ್ಯಾನವನದಲ್ಲಿ ರಜಾ ದಿನಗಳಂದು ಸಾರ್ವಜನಿಕರು, ಪ್ರವಾಸಿಗರು ಹಾಗು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವುದರಿಂದ ಮತ್ತು ರಜಾ ದಿನಗಳಂದು ಕಬ್ಬನ್ ಉದ್ಯಾನವನ ವ್ಯಾಪ್ತಿಯಲ್ಲಿರುವ ಬಾಲಭವನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಭೇಟಿ ನೀಡುವುದರಿಂದ, ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಮಕ್ಕಳ ಸ್ವಚ್ಛಂದ ವಿಹಾರಕ್ಕಾಗಿ ಕಬ್ಬನ್ ಉದ್ಯಾನವನದ ವಾಯುವಿಹಾರಿಗಳ ಸಂಘ ಹಾಗೂ ಕಬ್ಬನ್ ಉದ್ಯಾನವನ ಸಂರಕ್ಷಣಾ ಸಮಿತಿಯ ಸದಸ್ಯರು ಕಬ್ಬನ್ ಉದ್ಯಾನವನದಲ್ಲಿ ರಜಾ ದಿನಗಳಂದು ವಾಹನ ಸಂಚಾರವನ್ನು ನಿರ್ಬಂಧಿಸುವಂತೆ ಒತ್ತಾಯಿಸಿರುತ್ತಾರೆ.

ಕಬ್ಬನ್ ಉದ್ಯಾನವನ ವ್ಯಾಪ್ತಿಯ ಕ್ವೀನ್ಸ್ ವಿಕ್ಟೋರಿಯಾ ಪ್ರತಿಮೆಯ ಮುಖ್ಯ ದ್ವಾರದಿಂದ ಕಿಂಗ್ ಎಡ್ವರ್ಡ್ ಪ್ರತಿಮೆಯವರೆಗೆ ಒಂದು ಬದಿಯಲ್ಲಿ ಮತ್ತು KSLTA ಸ್ಟೇಡಿಯಂ ಹಿಂಭಾಗದ ಪ್ರದೇಶದಲ್ಲಿ ಹಾಗೂ ಹಳೆಯ KGID ಕಟ್ಟಡದ ಪಕ್ಕದಲ್ಲಿ ರಜಾ ದಿನಗಳಂದು ಸಾರ್ವಜನಿಕರ ವಾಹನಗಳ ನಿಲುಗಡೆಗೆ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿರುತ್ತದೆ.

**ಸಂಖ್ಯೆ: HORTI 483 HGM 2026**

P.S. – Kori

**(ಎಸ್. ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**